ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾ ದಂ. ರವರ ನ್ಯಾಯಾಲಯ, ಪಿರಿಯಾಪಟ್ಟಣ.

ಸಿ.ಸಿ. ಸಂಃ **402/2016**

| | | |
|---|---|---|
| ಸಾಕ್ಷಿಯ ಹೆಸರುಃ | ಮಹಾದೇವ | CW-2 |
| ತಂದೆಯ ಹೆಸರುಃ | ಜವರೇಗೌಡ | EBC |
| ವಯಸ್ಸುಃ | 53 ವರ್ಷ | ಪ್ರಮಾಣೀಕರಿಸಿದ ದಿಃ 09.07.2025 |
| ಉದ್ಯೋಗಃ | ವ್ಯವಸಾಯ | |
| ವಾಸ ಸ್ಥಳಃ | ಕಂಪಲಾಪುರ ಗ್ರಾಮ, ಪಿರಿಯಾಪಟ್ಟಣ ತಾಃ | |

ಮುಖ್ಯ ವಿಚಾರಣೆಃ ದೂರುದಾರರ ಪರ ವಕೀಲರಿಂದಃ

1. ದೂರುದಾರರು ಜಯಮ್ಮ ನನಗೆ ಗೊತ್ತು. ಅವರ ಪತಿಯ ಹೆಸರು ಗೋವಿಂದೇಗೌಡ. ಸದರಿ ಗೋವಿಂದೇಗೌಡರ 2 ನೇ ಪತ್ನಿಯ ಹೆಸರು ಮಲ್ಲಿಗೆ.
2. ಗೋವಿಂದೇಗೌಡ ಹಾಗೂ ಮಲ್ಲಿಗೆಯವರು ಪಿರಿಯಾಪಟ್ಟಣ ತಾಲೂಕಿನ ಮಾಲಂಗಿ ಗ್ರಾಮದವರು.
3. ಗೋವಿಂದೇಗೌಡರವರು ಮಲ್ಲಿಗೆಯವರನ್ನು ಸುಮಾರು 30 ವರ್ಷದ ಹಿಂದೆ ಮುತ್ತುರಾಯಸ್ವಾಮಿ ದೇವಸ್ಥಾನದಲ್ಲಿ ಮದುವೆಯಾಗಿದ್ದಾರೆ. ಸದರಿ ಮದುವೆಗೆ ನಾನು ಹಾಗೂ ನನ್ನ ಮಾವ ರಾಮೇಗೌಡ ಹೋಗಿದ್ದೆವು. ಸದರಿ ಮದುವೆಗೆ ಸುಮಾರು 40-45 ಜನ ಬಂದಿದ್ದರು, ಅವರ ಹೆಸರುಗಳು ನನಗೆ ಗೊತ್ತಿಲ್ಲ.
4. ಜಯಮ್ಮನವರ ತಂದೆ ಹೆಸರು ಲಕ್ಕೇಗೌಡ. ಸದರಿ ಲಕ್ಕೇಗೌಡರಿಗೆ 3 ಜನ ಗಂಡು ಮಕ್ಕಳು ಹಾಗೂ ಇಬ್ಬರು ಹೆಣ್ಣು ಮಕ್ಕಳು. ಜಯಮ್ಮರವರು 5 ನೇ ಮಗಳು. ಜಯಮ್ಮ ನವರ ಮಾವನ ಹೆಸರು ದಾಸೇಗೌಡ.
5. ಜಯಮ್ಮ ಹಾಗೂ ಗೋವಿಂದೇಗೌಡರ ಮದುವೆ ಸುಮಾರು 45 ವರ್ಷದ ಹಿಂದೆ ಕೆ.ಆರ್.ನಗರ ತಾಲೂಕಿನ ಚುಂಚನಕಟ್ಟೆಯ ಶ್ರೀರಾಮ ಕಲ್ಯಾಣ ಮಂಟಪದಲ್ಲಿ ಹಿಂದೂ ಸಂಪ್ರದಾಯದಂತೆ ಆಗಿದೆ. ನಾನು ಸದರಿಯವರ ಮದುವೆಗೆ ಹೋಗಿದ್ದೆ. ಮದುವೆಗೆ ಸುಮಾರು 350-400 ಜನ ಸೇರಿದ್ದರು.
6. ಮದುವೆಯಾದ ನಂತರ ಗಂಡ ಹೆಂಡತಿ ಸುಮಾರು 20-25 ವರ್ಷದವರೆಗೆ ಅನ್ಯೋನ್ಯವಾಗಿದ್ದರು. ಸದರಿಯವರಿಗೆ ಮಹಾದೇವ ಎಂಬ ಅಂಗವಿಕಲ ಮಗ ಇರುತ್ತಾನೆ. ಈಗ ಜಯಮ್ಮ ರವರು ಜವನಿಕುಪ್ಪೆಯಲ್ಲಿ ವಾಸವಿದ್ದಾರೆ.
7. ಮದುವೆ ಸಮಯದಲ್ಲಿ ಜಯಮ್ಮರವರು ಕಿವಿ ಓಲೆಗಳನ್ನು ತಂದಿದ್ದರು.

8. ಗೋವಿಂದೇಗೌಡರು ಮಲ್ಲಿಗೆ ಯವರನ್ನು ಮದುವೆಯಾದ ನಂತರ, ಮಲ್ಲಿಗೆ ರವರು ಗೋವಿಂದೇಗೌಡರ ಮನೆಗೆ ಬಂದು ಅದೇ ಮನೆಯಲ್ಲಿ ಇರುತ್ತೇನೆ ಎಂದು ಹೇಳಿದ್ದರಿಂದ ಅವರ ನಡುವೆ ಜಗಳವಾಗಿರುತ್ತದೆ.

9. ಆ ಸಮಯದಲ್ಲಿ ಗೋವಿಂದೇಗೌಡರು ಜಯಮ್ಮ ರವರಿಗೆ ಮನೆಯ ಒಳಗೆ ಬರಬೇಡ ಎಂದು ಹಲ್ಲೆಮಾಡಿದ್ದು, ಮಲ್ಲಿಗೆರವರು ಜಯಮ್ಮ ರವರನ್ನು ಹಿಡಿದು ಎಳೆದಾಡಿರುತ್ತಾರೆ. ಮನೆಯ ಒಳಗಡೆ ಬಂದರೆ ಕೊಲೆ ಮಾಡುವುದಾಗಿ ಹೇಳಿರುತ್ತಾರೆ. ಸದರಿ ಘಟನೆ ನಡೆದ ಸುಮಾರು 15-16 ವರ್ಷ ಆಗಿದೆ. ನಾನು ಹಾಗೂ ಬೇರೆಯವರು ಸೇರಿ ಗಲಾಟೆ ಬಿಡಿಸಿರುತ್ತೇವೆ.

10. ನಾನು ಗೋವಿಂದೇಗೌಡ ಹಾಗೂ ಮಲ್ಲಿಗೆರವನ್ನು ನೋಡಿದರೆ ಗುರುತಿಸುತ್ತೀರಾ ಎಂದರೆ, ಅವರನ್ನು ನೋಡಿ ಅಪರ ದಿನಗಳಾದ್ದರಿಂದ ಗುರುತಿಸಲು ಆಗುವುದಿಲ್ಲ ಎಂದು ನುಡಿಯುತ್ತಾರೆ.

ಪಾಟೀ ಸವಾಲುಃ ಆರೋಪಿತರ ಪರ ವಕೀಲರು ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.

<u>ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು</u>

<u>ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.</u>

ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ
ಪಿರಿಯಾಪಟ್ಟಣ